ನೋವನ್ನು ಅವಳು 'ದ ಚೈಲ್ಡ್ ಈಸ್ ನಾಟ್ ಡೆಡ್' ಎಂಬ ಕವಿತೆಯಾಗಿಸಿದಳು. ಆ ಹೊತ್ತಿನಲ್ಲಿ ಇನ್‌ಗ್ರಿಡ್‌ಳ ಹೊರ ಮತ್ತು ಒಳಬದುಕು ಕಡಲಿನಂತೆ ಪ್ರಕ್ಷುಬ್ಧವಾಗಿತ್ತು. ದಕ್ಷಿಣ ಆಫ್ರಿಕಾದ ಜನಾಂಗೀಯ ಭೇದದ ಒಳತಳಮಳಗಳು ಅವಳನ್ನು ಒಂಟಿಯಾಗಿಸಿದ್ದವು. ಒಂದು ದಿನ ಅವಳು ಹೊಸ ಅರಿವನ್ನು ಪಡೆದವಳ ಹಾಗೆ ಕಡಲ ದಂಡೆಯ ಮೇಲೆ ನಡೆಯುತ್ತ, ನಡೆಯುತ್ತ ಅದರ ಪ್ರಕ್ಷುಬ್ಧ ಅಲೆಗಳೊಳಗೆ ಸೇರಿ ಹೋದಳು. ವ್ಯಕ್ತಿಯೆಂಬ ಕಡಲು ಸೃಷ್ಟಿಯ ಕಡಲಿನ ಜೊತೆ ಬೆರೆತ ಕವಿತೆಯ ಹಾಗೆ ಕಾಣುವ ಈ ದೃಶ್ಯವು, ನಮ್ಮ ಎದೆಯೊಳಗೂ ಮೊರೆಯುವ ಕಡಲನ್ನು ಸೃಷ್ಟಿಸುವಂತಹದ್ದು.

ಇನ್‌ಗ್ರಿಡ್‌ಳ ಸಾವಿನ 30 ವರ್ಷಗಳ ನಂತರ 1994ರ ಮೇ, 24ರಂದುದಕ್ಷಿಣ ಆಫ್ರಿಕಾದ ಮೊದಲ 'ಡೆಮೊಕ್ರಟಿಕ್ ಪಾರ್ಲಿಮೆಂಟ್' ಆರಂಭವಾಯಿತು. ಇದನ್ನು ಉದ್ಘಾಟಿಸಿದ ನೆಲ್ಸನ್ ಮಂಡೇಲರ ಆ ದಿನದ ಭಾಷಣದ ಭಾಗಗಳು ಹೀಗಿವೆ: "ನಮ್ಮ ರಾಷ್ಟ್ರವು ತನ್ನ ಗಂಡು ಹೆಣ್ಣುಮಕ್ಕಳು, ತಂದೆತಾಯಿಯರು, ಯುವಕಯುವತಿಯರು ಮತ್ತು ಪುಟ್ಟ ಮಕ್ಕಳ ಪವಿತ್ರ ನೆನಪನ್ನು ಗೌರವಿಸುವ ಕಾಲ ಖಂಡಿತವಾಗಿ ಬರಲಿದೆ. ಅವರು, ತಮ್ಮ ಆಲೋಚನೆ ಮತ್ತು ಕ್ರಿಯೆಗಳಿಂದ ನಮಗೆಲ್ಲರಿಗೂ 'ನಾವು ದಕ್ಷಿಣ ಆಫ್ರಿಕನ್ನರು, ನಾವು ಆಫ್ರಿಕಾದವರು ಮತ್ತು ನಾವು ವಿಶ್ವದ ನಾಗರಿಕರು' ಎಂದು ಹೆಮ್ಮೆಯಿಂದ ಸಾರಿ ಹೇಳುವ ಹಕ್ಕನ್ನು ಸಂಪಾದಿಸಿಕೊಟ್ಟಿದ್ದಾರೆ.

ವಯಸ್ಸು ಕಳೆದು ಮನಸ್ಸು ಮಾಗಿದ ಹಾಗೆ ಕೆಲವು ಸಂಗತಿಗಳು ಖಚಿತವಾಗುತ್ತವೆ. ಆ ಹಿನ್ನೆಲೆಯಲ್ಲಿ ನೋಡಿದಾಗ, ಮೇಲೆ ಹೇಳಿದ ಮಹನೀಯರ ಸಾಲಿನಲ್ಲಿ ಒಬ್ಬ ಆಫ್ರಿಕಾನರ್ ಮಹಿಳೆ ಇದ್ದಾಳೆ. ಅವಳು ತನ್ನ ನಿರ್ದಿಷ್ಟ ಅನುಭವಗಳ ಪರಿಮಿತಿಯನ್ನು ಮೀರಿ ದಕ್ಷಿಣ ಆಫ್ರಿಕಾದ, ಆಫ್ರಿಕಾದ ಮತ್ತು ವಿಶ್ವದ ಪ್ರಜೆಯಾದಳು. ಅವಳ ಹೆಸರು ಇನ್‌ಗ್ರಿಡ್ ಯಾಂಕರ್. ಅವಳು ಕವಿಯೂ, ದಕ್ಷಿಣ ಆಫ್ರಿಕಾದ ಪ್ರಜೆಯೂ ಹೌದು. ಅವಳು ಆಫ್ರಿಕಾನರಳೂ, ಆಫ್ರಿಕನ್‌ಳೂ ಹೌದು. ಅವಳು ಕಲಾವಿದೆಯೂ, ಮನುಷ್ಯಳೂ ಆಗಿದ್ದಳು.

ಆಳವಾದ ಹತಾಶೆಗಳ ನಡುವೆಯೂ ಅವಳು ಕನಸು–ಭರವಸೆಗಳನ್ನು ಕಾಪಾಡಿಕೊಂಡಳು. ಅವುಗಳನ್ನು ತೆರೆದ ಸಂಭ್ರಮದಿಂದ ಸ್ವಾಗತಿಸಿದಳು. ಸಾವಿನ ಸನ್ನಿಧಿಯಲ್ಲಿ ಜೀವನದ ಸೌಂದರ್ಯವನ್ನು ಸಾರಿದಳು. ನಮ್ಮ ನಾಡಿನಲ್ಲಿ ಎಲ್ಲವೂ ನಿರಾಶೆಯಲ್ಲಿ ಮುಳುಗಿಹೋದಂತೆ ಕಾಣುತ್ತಿದ್ದ ಕತ್ತಲ ದಿನಗಳವು. ಅನೇಕರು ಅವಳ ಮನಮಿಡಿಯುವ ದನಿಯನ್ನು ಕೇಳಿಸಿಕೊಳ್ಳಲು ನಿರಾಕರಿಸಿದಾಗ, ಅವಳು ತನ್ನನ್ನೇ ಕೊಂದುಕೊಂಡಳು. ಅವಳ ಮತ್ತು ಅವಳಂಥ ಹಲವರ ಋಣ ತೀರಿಸಲು, ನಾವು ಜೀವಗಳ ರಕ್ಷಣೆಗೆ ಬದ್ಧವಾಗಬೇಕಿದೆ. ಅವಳಿಗಾಗಿ ಮತ್ತು ಅವಳಂಥ ಹಲವರಿಗಾಗಿ ನಾವು ಬಡವರ, ದಮನಿತರ, ದುಃಖಿತರ, ದ್ವೇಷಕ್ಕೆ ಗುರಿಯಾಗುತ್ತಿರುವವರ ಪರವಾಗಿ ಪಣ ತೊಡಬೇಕಾಗಿದೆ.

ಶಾರ್ಪ್‌ವಿಲ್ ನಗರದಲ್ಲಿ ಕಡ್ಡಾಯ ಅಪ್ಪಣೆಚೀಟಿಗಳನ್ನು ತೋರಿಸುವುದರ ವಿರುದ್ಧ ನಡೆದ ಪ್ರತಿಭಟನೆಯ ನಂತರ ಯಾಂಕರ್ ಈ ಕವಿತೆಯನ್ನು ಬರೆದಳು:

## ಮಗು ಸತ್ತಿಲ್ಲ

ಮಗು ಸತ್ತಿಲ್ಲ
ಎತ್ತುತ್ತಿದೆ ಅದು ತನ್ನ ಬಿಗಿದ ಮುಷ್ಟಿಯನ್ನು ತಾಯಿಯ ಕಡೆಗೆ
ಚೀರುತ್ತಿದೆ Afrika ಎಂದು! ಚೀರುತ್ತಿದೆ